ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 2, May-June 2026, Pp. 157-162
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ‘ಪ್ರಬುದ್ಧ ಭಾರತ’ ನಿರ್ಮಿಸುವಲ್ಲಿ ಸಾಮಾಜಿಕ ಪರಿವರ್ತನಾ ಚಳವಳಿಗಳ ಪಾತ್ರ

**ಡಾ. ಮಂಜು ಸಿ. ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು

***Abstract:***
*‘ಪ್ರಬುದ್ಧ ಭಾರತ’ ನಿರ್ಮಿಸುವಲ್ಲಿ ಸಾಮಾಜಿಕ ಪರಿವರ್ತನಾ ಚಳವಳಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂಬುದನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಸಮಾಜಮುಖಿ ಚಿಂತಕರಾದ ಮಹಾತ್ಮ ಜ್ಯೋತಿಬಾ ಫುಲೆ, ಛತ್ರಪತಿ ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಪೆರಿಯಾರ್, ಹಾಗೂ ಡಾ. ಬಿ. ಆರ್ ಅಂಬೇಡ್ಕರ್ ಅವರ ಸಮಾನತೆಯ ತತ್ವಗಳನ್ನು ಪರಿಶೀಲಿಸಲಾಗಿದೆ. ಅಕ್ಷರದ ಕ್ರಾಂತಿ, ಸಾಮಾಜಿಕ ಪ್ರಾತಿನಿಧ್ಯತೆ, ಶೈಕ್ಷಣಿಕ ಮತ್ತು ಆರ್ಥಿಕ ಸುಧಾರಣೆಗಳು ಹಾಗೂ ಸ್ವಾಭಿಮಾನ ಚಳವಳಿಗಳ ಪ್ರಾಮುಖ್ಯತೆಯನ್ನು ಈ ಅಧ್ಯಯನವು ತಿಳಿಸುತ್ತದೆ. ಪ್ರಬುದ್ಧ ಭಾರತ ನಿರ್ಮಾಣಕ್ಕಾಗಿ ನಡೆದ ಸಾಮಾಜಿಕ ಪರಿವರ್ತನಾ ಚಳವಳಿಗಳು ಜನಸಾಮಾನ್ಯರ ಬದುಕಿನ ಅನುಭವಗಳೊಂದಿಗೆ ಸಮನ್ವಯಗೊಳಿಸಿ ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಒತ್ತಿ ಹೇಳುತ್ತದೆ ಎಂಬುದು ಈ ಲೇಖನದ ಮುಖ್ಯ ನಿರ್ಣಯವಾಗಿದೆ.*

***Keywords:*** *ಪ್ರಬುದ್ಧ ಭಾರತ, ಅಕ್ಷರದ ಕ್ರಾಂತಿ, ಸಾಮಾಜಿಕ ಪ್ರಾತಿನಿಧ್ಯತೆ, ಶೈಕ್ಷಣಿಕ ಸುಧಾರಣೆ, ಸ್ವಾಭಿಮಾನ ಚಳವಳಿ.*

## ಪೀಠಿಕೆ

ಭಾರತದ ಇತಿಹಾಸದಲ್ಲಿ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನವು ಪ್ರಮುಖ ಕಾಲಘಟ್ಟವಾಗಿದೆ. ಈ ಕಾಲಘಟ್ಟದಲ್ಲಿ ನಡೆದ ಸಾಮಾಜಿಕ ಪರಿವರ್ತನಾ ಚಳವಳಿಯ ಹೋರಾಟಗಳು, ಪ್ರಬುದ್ಧ ಭಾರತ ನಿರ್ಮಿಸುವಲ್ಲಿ ಪ್ರಧಾನ ಪಾತ್ರ ವಹಿಸಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಚಳವಳಿಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಮಾನತೆಗೆ ಕರೆ ನೀಡಿದವು. ಭಾರತದ ಅನೇಕ ಸಮಾಜ ಸುಧಾರಕರು, ದಾರ್ಶನಿಕರು, ರಾಜ ಮಹಾರಾಜರು ಈ ಯುಗದಲ್ಲಿ ತಮ್ಮ ಹೋರಾಟಗಳನ್ನು ಪ್ರಾರಂಭಿಸಿದರು. ಈ ಶತಮಾನದಲ್ಲಿ ಪ್ರಧಾನವಾಗಿ ಶಿಕ್ಷಣದ ಕ್ರಾಂತಿ, ಸಾಮಾಜಿಕ ಪ್ರಾತಿನಿಧ್ಯತೆಯ ಹೋರಾಟಗಳು, ಸ್ವಾಭಿಮಾನದ ಪ್ರತಿಭಟನೆಗಳು ಜರುಗಿದವು. ಈ ಎಲ್ಲಾ ಪ್ರತಿಭಟನೆಗಳ ಮೂಲ ಧ್ಯೇಯ ಎಂದರೆ ‘ಪ್ರಬುದ್ಧ ಭಾರತ’ ನಿರ್ಮಿಸುವುದು. ಚಳವಳಿಯ ಕಾಲದಲ್ಲಿ ಹೊಸಮತಕ್ಕೆ ಬಂದವರು ತಮ್ಮ ಹಳೆಯ ಜಾತಿಗಳ ವಾಸನೆ ಬಿಡದೆ ಗೊಣಗಾಡಿದ್ದನ್ನು ಕಂಡಿದ್ದೇವೆ. ಆದರೆ ಈ ಚಳವಳಿಯ ಕಾಲದಲ್ಲಿ ಅಸ್ಪೃಶ್ಯ ವರ್ಗದವರ ಕಣ್ಣಲ್ಲಿ ಕಾಣಿಸಿಕೊಂಡ

***Please cite this article as:*** ಮಂಜು, ಸಿ.ಎನ್. (2026). ‘ಪ್ರಬುದ್ಧ ಭಾರತ’ ನಿರ್ಮಿಸುವಲ್ಲಿ ಸಾಮಾಜಿಕ ಪರಿವರ್ತನಾ ಚಳವಳಿಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(2), 157–162

ಹೊಳಪು ಎಂಥ ಕಾಲಕ್ಕೂ ಮಾರ್ಗದರ್ಶನ ವಾಗಬಲ್ಲಂತಹುದು.

ಸಾಮಾಜಿಕ ಪರಿವರ್ತನಾ ಚಳವಳಿಯಲ್ಲಿ ಸಾಕಷ್ಟು ನಾಯಕರು ಪ್ರಧಾನ ಪಾತ್ರ ವಹಿಸಿದರು. ವ್ಯಕ್ತಿಯು ಎಂಥವನು ಎಂಬುದನ್ನು ಅಭಿವ್ಯಕ್ತಿಯ ಮೂಲಕ ಅರಿಯಬೇಕಾಗುತ್ತದೆ. ಬಹುಶಃ ಹೀಗೆ ಹೇಳುವುದರಿಂದ ಪೂರ್ಣ ವಾಸ್ತವತೆಯನ್ನು ಹೇಳಿದಂತಲ್ಲ. ಏಕೆಂದರೆ, ವ್ಯಕ್ತಿಯ ಸರ್ವಾಂಶಗಳನ್ನೂ ಅಭಿವ್ಯಕ್ತಿಯಲ್ಲಿ ಕಾಣಲಾಗುವುದಿಲ್ಲ. ಇದಕ್ಕೆ ಸಹಜವಾಗಿ ಇರುವ ಮಿತಿಗಳು ಹಾಗೂ ಮಾನಸಿಕ ಅಡೆತಡೆಗಳು ಕಾರಣ. ಈ ಪ್ರಸಂಗದಲ್ಲಿ ವ್ಯಕ್ತಿಯ ಎರಡು ಅಂಶಗಳನ್ನು ಉದಾಹರಿಸಿ 'ದಿಟ–ಸಟೆ'ಗಳನ್ನೂ ಹೇಳುವುದುಂಟು. ಅವು ಮನಸ್ಸು ಮತ್ತು ಮುಖ. ಒಂದು ಹೇಳಿಕೆಯ ಪ್ರಕಾರ "ಮುಖವು ಮನಸ್ಸಿನ ಕನ್ನಡಿ. ಇನ್ನೊಂದರ ಪ್ರಕಾರ ಮುಖವು ಮನಸ್ಸಿನ ಮೊಗವಾಡ. ಆದುದರಿಂದಲೇ ವ್ಯಕ್ತಿಯು ಅಭಿವ್ಯಕ್ತಿಯಲ್ಲಿ ವ್ಯಕ್ತನಾಗುತ್ತಾನೆ, ಇಲ್ಲವೆ ಸರಿಯಾಗಿ ವ್ಯಕ್ತವಾಗುವುದಿಲ್ಲ ಅಥವಾ ವಿರೂಪವಾಗಿ ವ್ಯಕ್ತನಾಗುತ್ತಾನೆ".[1] ಸಾಮಾಜಿಕ ಚಳವಳಿಯ ಪ್ರತಿಭಟನಕಾರರು ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ತಿರುಗಿಬಿದ್ದು ಮಾನವೀಯ ನೆಲೆಯಲ್ಲಿ ಮನುಷ್ಯ ಮನುಷ್ಯ ಸಂಬಂಧಗಳನ್ನು ಗೌರವಿಸಿದಂತೆ ಬದಲಾವಣೆಗೆ ಹಾತೊರೆಯುವ ಹಾಗೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿದರು. ಹಲವಾರು ಸಮಾಜ ಸುಧಾರಕರು ಇಂಥ ಪವಿತ್ರ ಕೆಲಸಕ್ಕೆ ಕೈ ಹಾಕಿದರು.

### 18 ಮತ್ತು 19ನೇ ಶತಮಾನದಲ್ಲಿ ನಡೆದ ಪ್ರಮುಖ ಸಾಮಾಜಿಕ ಪರಿವರ್ತನಾ ಚಳವಳಿಗಳು

- ಮಹಾತ್ಮ ಜ್ಯೋತಿಬಾ ಫುಲೆ ಅವರ ಅಕ್ಷರದ ಕ್ರಾಂತಿ
- ಛತ್ರಪತಿ ಶಾಹುಮಹಾರಾಜ ಅವರ ಸಾಮಾಜಿಕ ಪ್ರಾತಿನಿಧ್ಯತೆ
- ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳು
- ತಂದೆ ಪೆರಿಯಾರ್ ರಾಮಸ್ವಾಮಿ ನಾಯಕ ಅವರ ಸ್ವಾಭಿಮಾನ ಚಳವಳಿ

### ಮಹಾತ್ಮ ಜ್ಯೋತಿಬಾ ಫುಲೆ ಅವರ ಅಕ್ಷರದ ಕ್ರಾಂತಿ

ಭಾರತದ ಸಾಮಾಜಿಕ ಕ್ರಾಂತಿಯ ತಂದೆಯಾದ ಮಹಾತ್ಮ ಜ್ಯೋತಿಬಾ ಫುಲೆ ಅವರು ಆಧುನಿಕ ಭಾರತದಲ್ಲಿ ಜರ್ಝರಿತ ಸಮಾಜ ರಚನೆಯ ವಿರುದ್ಧ ಬಂಡಾಯದ ಸ್ವರವೆತ್ತಿದ ಮೊದಲನೆಯ ಮಹಾಪುರುಷ. ಹಿಂದುಳಿದ ಸಮುದಾಯಕ್ಕೆ ಸೇರಿದ ಜ್ಯೋತಿಬಾ ಫುಲೆ ಅವರು 1847ರಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪೂರ್ಣಗೊಳಿಸಿದರು. ಅಂದಿನ ದಿನಗಳಲ್ಲಿ ಬ್ರಾಹ್ಮಣರ ಚಿತಾವಣೆ ಮೇರೆಗೆ ನಡೆದ ಭಾರತೀಯರ ಬಂಡಾಯವು ತರುಣ ಜ್ಯೋತಿಬಾ ಫುಲೆಯವರ ಮೇಲೆ ಆಳವಾದ ಪ್ರಭಾವ ಬೀರಿದ್ದವು. ಆದ ಕಾರಣ, ಬ್ರಿಟಿಷರನ್ನು ಭಾರತದಿಂದ ತೊಲಗಿಸುವುದು ತನ್ನ ಪವಿತ್ರ ಕರ್ತವ್ಯ ಎಂದು ಅವರು ತಿಳಿದಿದ್ದರು. ಆದರೆ 1848ರಲ್ಲಿ ನಡೆದ ಘಟನೆಯು ಅವರ ಜೀವನದ ದಿಕ್ಕನ್ನೇ ಬದಲಿಸಿತು.

1848ರಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರು ಒಬ್ಬ ಬ್ರಾಹ್ಮಣ ಮಿತ್ರನ ಮದುವೆಯ ಮೆರವಣಿಗೆಯಲ್ಲಿ ಭಾಗವಹಿಸಿದ ತಪ್ಪಿಗಾಗಿ ಕೆಲವು ಹಿರಿಯ ಬ್ರಾಹ್ಮಣರೆಲ್ಲರೂ ಸೇರಿ ಅವರನ್ನು ಅಪಮಾನಿಸಿ, ಮೆರವಣಿಗೆಯಿಂದ ಹೊರಗುಳಿಸಿದರು. ಈ ಘಟನೆಯ ಪರಿಣಾಮವಾಗಿ, ಶೂದ್ರಾತಿ ಶೂದ್ರರಿಗೆ ಶಿಕ್ಷಣ ನೀಡುವ ಚಳವಳಿಗೆ ಫುಲೆ ಅವರು ನಾಂದಿ ಹಾಡಿದರು. ನಂತರ ಇದೇ ಫುಲೆ ಅವರು "ನಾವು ಬ್ರಿಟಿಷರಿಗೆ ಚಿರಋಣಿಯಾಗಿರಬೇಕು. ಅವರ ಅನುಕಂಪವನ್ನು ನಾವು ಮರೆಯುವಂತೆಯೇ ಇಲ್ಲ. ಶತಮಾನಗಳ ಕಾಲದ ಬ್ರಾಹ್ಮಣವಾದಿ ಶೋಷಣೆಯಿಂದ ನಮ್ಮನ್ನು ಬಿಡುಗಡೆಗೊಳಿಸಿ ನಮ್ಮ ಮಕ್ಕಳಿಗೆ ಭರವಸೆಯ ಭವಿಷ್ಯವನ್ನು ನೀಡಿದವರು ಬ್ರಿಟಿಷರು. ಈ ನಾಡಿಗೆ ಬ್ರಿಟಿಷರು ದೊರೆಗಳಾಗಿ ಬಾರದೇ ಇದ್ದಲ್ಲಿ ಭಟ್ಟರು (ಬ್ರಾಹ್ಮಣರು) ನಮ್ಮನ್ನು ಸರ್ವನಾಶ ಮಾಡಿರುತ್ತಿದ್ದರು"[2] ಎಂದು ಹೇಳಿದರು.

ಭಾರತದ ಜಗಮಾದರಿ ದಂಪತಿಗಳಾದ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರು ಈ ನಾಡಿನಲ್ಲಿ ಹುಟ್ಟದೆ ಇದ್ದಿದ್ದರೆ ಮೂಲ ಭಾರತೀಯರ ಬಾಳು ಕತ್ತಲೆಯಾಗಿರುತ್ತಿತ್ತು. ಅಕ್ಷರದ ಮಹತ್ವವನ್ನು ಅರಿತ ಜ್ಯೋತಿಬಾ ಅವರು ಕನ್ಯಾ ಪಾಠಶಾಲೆ ಆರಂಭಿಸುವ ಸಮಯದಲ್ಲಿ ಮಾಡಿದ ಭಾಷಣ ಅವರ ಸಾಮಾಜಿಕ ಕ್ರಾಂತಿಯ ಸ್ಪಷ್ಟ ದಿಕ್ಕನ್ನು ಸೂಚಿಸಿದೆ. ಅವರು ಹೇಳಿದ ನಮ್ಮ ಜನಾಂಗದ ಮಹಾರ, ಮಾಂಗ, ಚಮ್ಮಾರ ಮುಂತಾದ ಜಾತಿಯ ಸೋದರ–ಸೋದರಿಯನ್ನು ದುಃಖದ ಕಗ್ಗತ್ತಲೆ ಆವರಿಸಿದೆ. ಅವರನ್ನು ಸುಧಾರಿಸುವ ಸ್ಫೂರ್ತಿ ನನ್ನಲ್ಲಿ ಅಂಕುರಿತವಾಗಿದೆ. ಮೊತ್ತ ಮೊದಲು ಕನ್ಯಾ ಪಾಠಶಾಲೆಯನ್ನು ಪ್ರಾರಂಭ ಮಾಡುವ ಬಯಕೆ ನನ್ನಲ್ಲಿ ಉಂಟಾಯಿತು. ಗಂಭೀರವಾಗಿ ವಿಚಾರ ಮಾಡುವಾಗ ನನಗೆ ಗಂಡು ಮಕ್ಕಳ ಶಾಲೆಗಿಂತ ಹೆಣ್ಣು ಮಕ್ಕಳ ಶಾಲೆ ಅಗತ್ಯವೆನಿಸಿತು. ಅಲ್ಲದೆ ಇದು ನನ್ನ ಜೀವನದ ಧ್ಯೇಯವೆಂದು ಬಗೆದು ಈ ದಾರಿಯಲ್ಲಿ ಮುಂದುವರೆಯುವೆ. ಇದಕ್ಕೆ ಹೆಣ್ಣು ಮಕ್ಕಳ ತಂದೆ ತಾಯಿಯರು ಸಹಕಾರ ನೀಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು ಎಂದು ಕೇಳಿಕೊಂಡು 1848–49 ರಲ್ಲಿ ಫುಲೆ ಅವರು ಶೂದ್ರಾತಿಶೂದ್ರ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದರು. ಇವತ್ತು ಎಲ್ಲಾ ಶಾಲೆಗಳ ಗೋಡೆಯ ಮೇಲೆ ಕಂಡು ಬರುವ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಘೋಷ ವಾಕ್ಯವು ಮಹಾತ್ಮ ಜ್ಯೋತಿಬಾ ಫುಲೆ ಅವರ ನಾಣ್ಣುಡಿಯಾಗಿದೆ.

ಕೇವಲ ಒಂದು ವರ್ಗಕ್ಕೆ ಮೀಸಲಾಗಿದ್ದ ಶಿಕ್ಷಣವನ್ನು ಭಾರತದ ಹಿಂದುಳಿದ ಎಲ್ಲಾ ವರ್ಗಗಳಿಗೆ ವಿಸ್ತರಿಸಿದ ಈ ದಂಪತಿಗಳೇ ನಿಜಕ್ಕೂ ಧನ್ಯರು. ಮಾತೆ ಸಾವಿತ್ರಿಬಾಯಿ ಫುಲೆ ಅವರು ಜ್ಯೋತಿಬಾ ಫುಲೆ ಅವರ ಹೋರಾಟಕ್ಕೆ ಸಹಕಾರವನ್ನು ನೀಡಿ ಭಾರತದ ಮೊದಲ ಮಹಿಳಾ ಶಿಕ್ಷಕಿ ಎಂಬ ಕೀರ್ತಿಗೆ ಪ್ರೀತಿ ಪಾತ್ರರಾಗಿದ್ದಾರೆ. ಹಲವಾರು ಶೋಷಣೆಗಳ ನಡುವೆಯು ಸಹ ಸಾವಿತ್ರಿಬಾಯಿ ಫುಲೆ ಅವರು ಶಾಲೆಗೆ ಹೋಗಿ ಅಕ್ಷರವನ್ನು ಕಲಿಸುತ್ತಿದ್ದರು. ಸಾವಿತ್ರಿಬಾಯಿ ಫುಲೆಯವರು ಶಾಲೆಗೆ ಹೋಗುವಾಗ ಮನುವಾದಿಗಳು ಅನೇಕ ಕಾಟಗಳನ್ನು ಕೊಟ್ಟರು. ಸಗಣಿಯನ್ನು ಎರಚಿದರು, ಟಮೋಟವನ್ನು ಎಸೆದರು, ದಾರಿಗೆ ಮುಳ್ಳುಗಳನ್ನು ಹಾಕಿದರು ಇದ್ಯಾವುದನ್ನು ಲೆಕ್ಕಿಸದೆ ಸಾವಿತ್ರಿಬಾಯಿ ಫುಲೆ ಅವರು ಹಿಂದುಳಿದ ವರ್ಗದವರಿಗೆ ಅಕ್ಷರಾಭ್ಯಾಸ ಮಾಡಿಸಿದರು.

ಶಿಕ್ಷಣದ ಪ್ರಾಮುಖ್ಯತೆಯನ್ನು ಕುರಿತು ಜ್ಯೋತಿಬಾ ಫುಲೆ ಅವರು "ಶಿಕ್ಷಣ ಇಲ್ಲದ್ದರಿಂದಾಗಿ ಕ್ರಿಯಾಶೀಲತೆ ನಾಶವಾಯಿತು. ಕ್ರಿಯಾಶೀಲತೆ ಇಲ್ಲದ್ದರಿಂದಾಗಿ ಸಂಪತ್ತು ನಾಶವಾಯಿತು. ಸಂಪತ್ತು ಇಲ್ಲದ್ದರಿಂದಾಗಿ ಶೂದ್ರರು ಅವನತಿಗಿಳಿದರು. ಹೀಗೆ ಶಿಕ್ಷಣವಿಲ್ಲದಿರುವುದು ಎಲ್ಲಾ ಬಗೆಯ ಅವನತಿಗೆ ಕಾರಣವಾಯಿತು"[3] ಎಂದು ಹೇಳಿದರು. 'ದುಡ್ಡೆ ದೊಡ್ಡಪ್ಪ ವಿದ್ಯೆ ಅವರಪ್ಪ' ಎನ್ನುವ ನಾಣ್ಣುಡಿಯಂತೆ ಶಿಕ್ಷಣಕ್ಕಾಗಿ ಜ್ಯೋತಿಬಾ ಫುಲೆ ದಂಪತಿಗಳು ತಮ್ಮ ಜೀವನವನ್ನೇ ತ್ಯಾಗ ಮಾಡಿದರು. ಇವರಿಬ್ಬರ ಮಹಾನ್ ಚೇತನ ಬಾಬಾ ಸಾಹೇಬ್ ಅಂಬೇಡ್ಕರ್ ಆಗಿ ಮತ್ತೆ ನವಕುಲಕ್ಕೆ ಇಪ್ಪತ್ತನೆಯ ಶತಮಾನದಲ್ಲಿ ಮಹಾನ್ ಜ್ಯೋತಿಯಾಗಿ ಉದಯವಾಯಿತು.

**ಶಾಹು ಮಹಾರಾಜ್ ಅವರ ಸಾಮಾಜಿಕ ಪ್ರಾತಿನಿಧ್ಯತೆ**

ಸಾಮಾಜಿಕ ಪ್ರಜಾಪ್ರಭುತ್ವದ ರೂವಾರಿ ಛತ್ರಪತಿ ಶಾಹು ಮಹಾರಾಜ್. ಮಹಾತ್ಮ ಜ್ಯೋತಿಬಾ ಫುಲೆ ಅವರ ಹೋರಾಟದ ಫಲವಾಗಿ ಅಸ್ಪೃಶ್ಯರು ಮತ್ತು ಹಿಂದುಳಿದವರಿಗೆ ಶಿಕ್ಷಣ ದೊರೆಯಿತು. ಶಿಕ್ಷಣದ ಜೊತೆಗೆ ಹಿಂದುಳಿದವರಿಗೆ ಅಧಿಕಾರದಲ್ಲಿ ಸಮಪಾಲು ಮತ್ತು ಸಾಮಾಜಿಕ ಸ್ಥಾನ–ಮಾನ ದೊರಕಿಸಿಕೊಟ್ಟ ಮಹಾನ್ ಚೇತನ ಛತ್ರಪತಿ ಶಾಹು ಮಹಾರಾಜ್‌ರವರು. ಕೊಲ್ಲಾಪುರ ಪ್ರಾಂತ್ಯದ ಶಾಹು ಮಹಾರಾಜರು ಹಿಂದುಳಿದ ಕುಣಬಿ ಮರಾಠ ಸಮಾಜಕ್ಕೆ ಸೇರಿದವರು. ಅಧಿಕಾರದ ಸಮಪಾಲಿಗಾಗಿ ಹೋರಾಡಿದ ಶಾಹು ಮಹಾರಾಜರ ಜೀವನದಲ್ಲಿ ನಡೆದ ಒಂದು ಘಟನೆ ಅವರ ಜೀವನದ ದಿಕ್ಕನ್ನೇ

ಬದಲಿಸಿತು. ಶಾಹು ಮಹಾರಾಜರ ಆಸ್ಥಾನ ಪುರೋಹಿತನೊಬ್ಬ ಮಹಾರಾಜರು ಪಂಚಗಂಗಾ ಕಲ್ಯಾಣಿಯಲ್ಲಿ ಸ್ನಾನ ಮಾಡುವಾಗ ಇವರು ಶೂದ್ರ ಜಾತಿಯವರೆಂದು ಪರಿಗಣಿಸಿ ವೈದಿಕ ಸಂಪ್ರದಾಯದ ಪ್ರಕಾರ ಮಂತ್ರ ಪಠಣ ಮಾಡುವುದನ್ನು ನಿರಾಕರಿಸಿದನು. ಈ ಘಟನೆಯಿಂದ ಅವಮಾನಿತರಾದ ಮಹಾರಾಜರು ಬ್ರಾಹ್ಮಣರು ಮತ್ತು ಕುಲಕರ್ಣಿಗಳಿಗೆ ತಮ್ಮ ಪ್ರಾಂತ್ಯದಲ್ಲಿ ನೀಡುತ್ತಿದ್ದ ವಂಶಪಾರಂಪರ್ಯ ಸವಲತ್ತುಗಳನ್ನು ನಿಷೇಧಿಸಿದರು. ಪಂಚಗಂಗ ಕಲ್ಯಾಣಿ ಘಟನೆಯಿಂದ ಅವಮಾನಿತರಾದ ಮಹಾರಾಜರು ಒಬ್ಬ ರಾಜನಿಗೆ ಇಂಥಾ ಪರಿಸ್ಥಿತಿ ಇರುವಾಗ ಇನ್ನು ಸಾಮಾನ್ಯ ಜನರ ಸ್ಥಿತಿ ಎಂಥದ್ದು ಎಂದು ಅರಿತುಕೊಂಡು ಸಾಮಾಜಿಕ ಸಮಾನತೆಗಾಗಿ ಹೋರಾಟ ಪ್ರಾರಂಭಿಸಿದರು. ಕೇವಲ ಒಂದು ವರ್ಗದ ಕಪಿಮುಷ್ಟಿಯಲ್ಲಿದ್ದ ಅಧಿಕಾರ ಸಂಪತ್ತು ಸಮಾನವಾಗಿ ಹಂಚಿಕೆಯಾಗಬೇಕೆಂದು ಆಗ್ರಹಿಸಿದರು.

ಶಾಹುಮಹಾರಾಜರು ಮನುವಾದದ ವಿರುದ್ಧ ಬಂಡಾಯ ಸಾರಿದರು. ಒಂದು ವರ್ಗವು ಮತ್ತೊಂದು ವರ್ಗದ ಮೇಲೆ ದಬ್ಬಾಳಿಕೆಯನ್ನು ನಡೆಸಲು ಅಧಿಕಾರವೇ ಮೂಲ ಕಾರಣ. ಪುರೋಹಿತಶಾಹಿ ವ್ಯವಸ್ಥೆ ಉನ್ನತ ಸ್ಥಾನವನ್ನು ಪಡೆದುಕೊಂಡಿದ್ದ ಈ ಕಾಲಘಟ್ಟದಲ್ಲಿ ಮಹಾರಾಜರು ಇದಕ್ಕೆ ವಿರುದ್ಧವಾದ ಚಳವಳಿಯನ್ನು ನಡೆಸಿದರು.

**ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆ**

'ಮರೆಯೋದುಂಟೆ ಮೈಸೂರು ದೊರೆಯ ಶ್ರೀ ನಾಲ್ವಡಿಕೃಷ್ಣರಾಜ ಒಡೆಯ' ಎಂದು ಜಗತ್ಪ್ರಸಿದ್ಧಿ ಪಡೆದಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರು ಈ ಶತಮಾನದಲ್ಲಿ ಹಲವಾರು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳನ್ನ ತಮ್ಮ ಆಡಳಿತದಲ್ಲಿ ಜಾರಿಗೆ ತಂದರು. ಸಾವಿರಾರು ವರುಷ ಕಳೆದರೂ ಸವೆಯದಂತ ಸಾಧನೆ ಮಾಡಿದ ಮಹಾರಾಜರು ಸಮಾನತಾ ಸಮಾಜದ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದರು. "ತತ್ವಜ್ಞಾನಿಯಾದ ಅರಸರು ಜಗತ್ತನ್ನು ಉಳಿಸಬಲ್ಲರು. ಆದುದರಿಂದ ಪ್ರಭು ತತ್ವಜ್ಞಾನಿಯಾಗಿರಬೇಕು"[4] ಎಂದು ಹೇಳಿರುವ ಪ್ಲೇಟೊ ಅವರ ಮಾತು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಅಕ್ಷರಶಃ ಸಲ್ಲುತ್ತದೆ. ಮೈಸೂರು ಪ್ರಾಂತ್ಯದ ಸಾಮಾಜಿಕ ಪರಿವರ್ತನೆಯ ರೂವಾರಿಯಾದ ಶ್ರೀ ಮಹಾರಾಜರು ಮೈಸೂರು ರಾಜ್ಯವನ್ನು ಬೆಳೆಸಿ ಇಡೀ ಭಾರತದಲ್ಲಿ ಅದೊಂದು ಮಾದರಿ ರಾಜ್ಯವಾಗುವಂತೆ ಮಾಡಿದರು. ಹಿಂದುಳಿದವರ, ಅಸ್ಪೃಶ್ಯರ ಆಶಾಕಿರಣವಾಗಿದ್ದ ಶ್ರೀ ನಾಲ್ವಡಿಯವರು ಸಾಮಾಜಿಕ ಕ್ರಾಂತಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಛಾಪನ್ನು ಮೂಡಿಸಿದರು. ಮೈಸೂರು ಸಂಸ್ಥಾನದಲ್ಲಿ ಹಿಂದುಳಿದವರಿಗೆ ಶೇ.75 ಮೀಸಲಾತಿಯನ್ನು ನೀಡಿದರು.

ರಾಜೋಚಿತ ವಿದ್ಯೆಯ ಕಲಿತು ತತ್ವಜ್ಞಾನಿಯಾದ ನಾಲ್ವಡಿ ಕೃಷ್ಣರಾಜರು ಶೈಕ್ಷಣಿಕ ಸಮಾನತೆಗೆ ಸಾಕಷ್ಟು ಸುಧಾರಣೆಗಳನ್ನು ಜಾರಿ ಮಾಡಿದರು. ಇವರು ಬುಡಕಟ್ಟು ಅರಣ್ಯವಾಸಿಗಳಿಗೆ ಮೊಟ್ಟಮೊದಲು ಶಾಲೆಗಳನ್ನು ತೆರೆದರು. ಅಸ್ಪೃಶ್ಯರಿಗಾಗಿ ಮೊದಲು ಹುಸ್ಕೂರು ಹಾಗೂ ನರಸೀಪುರದಲ್ಲಿ ಶಾಲೆಗಳನ್ನು ಪ್ರಾರಂಭಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣದ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ತಮ್ಮ ಆಡಳಿತಾವಧಿಯಲ್ಲಿ ಜಾರಿಗೆ ತಂದರು. ಗೆಜ್ಜೆಪೂಜೆ, ದೇವದಾಸಿ ಮುಂತಾದ ಅನಿಷ್ಟ ಪದ್ಧತಿಗಳನ್ನು ಸಂಪೂರ್ಣ ನಿರ್ಮೂಲನೆ ಮಾಡಿದರು. 1927ರಲ್ಲಿ ಸ್ತ್ರೀಯರಿಗೆ ಮೊದಲ ಬಾರಿಗೆ ಮತದಾನದ ಹಕ್ಕನ್ನು ಜಾರಿಗೊಳಿಸಿದರು. "ಮೈಸೂರು ರಾಜ್ಯದ ಆಡಳಿತದಲ್ಲಿ ನಾನು ಒಂದು ಹೊಸ ಪ್ರಯೋಗ ಆರಂಭಿಸಿದ್ದೇನೆ. ನಮ್ಮ ಪ್ರಜೆಗಳಿಗೆ ಅಖಂಡವಾದ ಸುಖ ಸಂಪತ್ತನ್ನು ಒದಗಿಸಿಕೊಡಬೇಕೆಂಬುದು ನನ್ನ ಜೀವನದ ಪರಮೋದ್ದೇಶ"[5] ಎಂದು ಹೇಳಿದರು.

ಕಲೆ, ಸಾಹಿತ್ಯ, ಸಂಸ್ಕೃತಿಗಾಗಿ ಕೊಡುಗೆ ನೀಡಿದ ಕೊಡುಗೈ ದಾನಿ, ಕನ್ನಂಬಾಡಿ ಕಟ್ಟೆಯ ಸಾಕ್ಷಿ ನಿಮ್ಮ

ಸಾಧನೆಗೆ ಜೀವನಾಡಿ ಎಂದು ಹಾಡಿ ಹೊಗಳಿರುವ ಬಹುಜನ ಕವಿ ಹನಸೋಗೆ ಸೋಮಶೇಖರ್ ಅವರು ನಾಲ್ವಡಿಯವರನ್ನು ಪ್ರತಿ ಮನೆ ಮನೆಗೂ ಪರಿಚಯಿಸಿದ್ದಾರೆ. ಆರ್ಥಿಕ ಸಮಾನತೆಗಾಗಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಭಾರತದ ಆರ್ಥಿಕ ಬೆನ್ನೆಲುಬು ಕೃಷಿ ಎಂದು ಅರಿತಿದ್ದ ನಾಲ್ವಡಿಯವರು ರೈತರಿಗೆ ಸುಲಭವಾಗಿ ಸಾಲ ದೊರೆಯುವಂತೆ ಅನುಕೂಲವಾಗಲು 1905ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದರು. ಮಂಡ್ಯ ಮತ್ತು ಮೈಸೂರು ಪ್ರಾಂತ್ಯದ ರೈತರ ಒಣಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ನಾಲ್ವಡಿಯವರು ಕಾವೇರಿ ನದಿಗೆ ಅಡ್ಡಲಾಗಿ 'ಕೃಷ್ಣರಾಜ ಸಾಗರ' ಅಣೆಕಟ್ಟೆಯನ್ನು ಕಟ್ಟಿಸಿ, ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ಜಮೀನಿಗೆ ನೀರಾವರಿ ಕಲ್ಪಿಸಿದರು.

**ಪೆರಿಯಾರ್ ರಾಮಸ್ವಾಮಿ ನಾಯಕರ ಸ್ವಾಭಿಮಾನ ಚಳವಳಿ**

ದ್ರಾವಿಡ ಜನಾಂಗದ ಸ್ವಾಭಿಮಾನ ಸಂಕೇತವಾದ ರಾಮಸ್ವಾಮಿ ನಾಯಕರು ದಕ್ಷಿಣ ಭಾರತದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳವಳಿಯನ್ನು ಕ್ರಾಂತಿಯ ಪ್ರಖರತೆಗೆ ಕೊಂಡೊಯ್ದು ಇಡೀ ಜಗತ್ತಿನ ಗಮನವನ್ನು ಸೆಳೆದರು. ತಂದೆ ಪೆರಿಯಾರ್ ಎನ್ನುವುದು ಕೇವಲ ನಾಯಕನೊಬ್ಬನ ನಾಮಮಾತ್ರವಲ್ಲ ಅದೊಂದು ಯುಗದ ಹೆಸರೂ ಹೌದು. ಹಿಂದುಳಿದವರು, ಅಸ್ಪೃಶ್ಯರು, ಮನುಧರ್ಮಶಾಸ್ತ್ರದಿಂದ ಕಳೆದುಕೊಂಡಿದ್ದ ವಿದ್ಯೆಯನ್ನು ಮಹಾತ್ಮ ಜ್ಯೋತಿಬಾ ಫುಲೆ ಅವರಿಂದ ಮರಳಿ ಪಡೆದರು. ಆಸ್ತಿ ಮತ್ತು ಅಧಿಕಾರದ ಸಂಪತ್ತನ್ನು ಶಾಹು ಮಹಾರಾಜ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರಿಂದ ಮತ್ತೆ ಪಡೆದುಕೊಂಡರು. ವಿದ್ಯೆ, ಆಸ್ತಿ, ಅಧಿಕಾರ, ಸಂಪತ್ತಿನ ಜೊತೆಗೆ ಸ್ವಾಭಿಮಾನ ಇರಬೇಕೆಂದು ರಾಮಸ್ವಾಮಿ ನಾಯಕರು ಸ್ವಾಭಿಮಾನ ಚಳವಳಿಯನ್ನು ಪ್ರಾರಂಭಿಸಿದರು. ಜೇನಿನಂತೆ ಕಾರ್ಯಮಗ್ನರಾಗಿ ದುಡಿದ ಪೆರಿಯಾರ್ ಅವರು ಗುಲಾಮರಾಗಿ ನೂರುಕಾಲ ಬಾಳುವುದಕ್ಕಿಂತ ಸ್ವಾಭಿಮಾನದಿಂದ ಮೂರುದಿವಸ ಬದುಕುವುದೇ ಶ್ರೇಷ್ಠವೆಂದು ಸಾರಿದರು. ಪ್ರತಿಜಾತಿಗಳಿಗೂ ಸಮಾನ ಅವಕಾಶ ದೊರೆಯಲು, ಜಾತಿ ಜನಸಂಖ್ಯಾವಾರು ಮೀಸಲಾತಿ ಜಾರಿಯಾಗಬೇಕೆಂದು ಆಗ್ರಹಿಸಿದರು. ಸ್ವಾಭಿಮಾನ ಚಳವಳಿಯು ದೇವರು, ಧರ್ಮ ಮತ್ತು ಬ್ರಾಹ್ಮಣ ವಿರೋಧಿ ಚಳವಳಿ ಎಂದು ಪೆರಿಯಾರ್ ಹೇಳಿದರು. ಇವರು ಕಪ್ಪು ಅನಿಷ್ಟ ಎಂಬ ಮನುವಾದಿ ನಂಬಿಕೆಯನ್ನು ಧಿಕ್ಕರಿಸಿ ಕಪ್ಪು ಶ್ರೇಷ್ಠ ಎಂದು ವೈಜ್ಞಾನಿಕ ವಿಶ್ಲೇಷಣೆ ಮಾಡಿ ದ್ರಾವಿಡ ಕಳಗಂ ಸಂಘಟನೆಗೆ ಕಪ್ಪು ಸಮವಸ್ತ್ರವನ್ನೇ ನಿಗದಿಪಡಿಸಿದರು.

ತಂದೆ ಪೆರಿಯಾರ್ ರಾಮಸ್ವಾಮಿ ನಾಯಕರು ಪ್ರತಿಯೊಬ್ಬರು ತಮ್ಮ ತಮ್ಮ ಜಾತಿ, ಭಾಷೆ, ತಿನ್ನುವ ಆಹಾರವನ್ನು ಪ್ರೀತಿಸಬೇಕು ಎಂದರು. ತಮಿಳುನಾಡಿನಲ್ಲಿ ಇವತ್ತಿಗೂ ತಮಿಳು ಭಾಷೆ ಉನ್ನತ ಸ್ಥಾನಮಾನವನ್ನು ಪಡೆದುಕೊಂಡಿದೆ ಎಂದರೆ ಅದಕ್ಕೆ ಕಾರಣ ಪೆರಿಯಾರ್ ಅವರ ಸ್ವಾಭಿಮಾನ ಹೋರಾಟದ ಪ್ರತಿಫಲ. ಮನುವಾದಿಗಳ ಕುತಂತ್ರದಿಂದ ಭಾರತದಲ್ಲಿ ಜಾತಿ ವ್ಯವಸ್ಥೆ ಆಳವಾಗಿ ಬೇರೂರಿದೆ. ಇದರ ವಿರುದ್ಧವಾಗಿ ಪೆರಿಯಾರ್ ಅವರು ದ್ರಾವಿಡ ಕಳಗಂ ಹೋರಾಟಕ್ಕಿಳಿದರು. ಇವರ ಪರಿಶ್ರಮ ತ್ಯಾಗದ ಪ್ರತಿಫಲವಾಗಿ ಹಿಂದುಳಿದವರು ಅಸ್ಪೃಶ್ಯರು ಅಭಿಮಾನದಿಂದ ತಲೆಎತ್ತಿ ಬಾಳುವಂತಾಯಿತು. ದೇವರು ಧರ್ಮಗಳನ್ನು ವಿರೋಧಿಸಿದ ನಾರಾಯಣಗುರು ಅವರು ನಿನಗೆ ನೀನೆ ಗುರು ಎಂದು ಕರೆ ನೀಡಿದರು. ಇವರು ವ್ಯವಸಾಯವನ್ನು ಆಧುನೀಕರಣಗೊಳಿಸಿ ಲಾಭದಾಯಕ ಕಸುಬಾಗಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಒತ್ತಾಯ ಮಾಡಿದರು. ಪೆರಿಯಾರರು "ನೀವು ದಾರಿಯಲ್ಲಿ ಹೋಗುವಾಗ ಒಂದು ಹಾವು ಮತ್ತು ಒಬ್ಬ ಹಾರುವ ಮನುವಾದಿ ಎದುರಿಗೆ ಬಂದಾಗ ಮೊದಲು ಹಾರುವನನ್ನು ಕೊಲ್ಲಿ, ಕಾರಣ ಹಾವು ಕಚ್ಚಿದರೆ ಒಬ್ಬ ಸಾಯುತ್ತಾನೆ. ಹಾರುವ ಕಚ್ಚಿದರೆ ಇಡೀ ಊರೆ

ಸಾಯುತ್ತದೆ"[6] ಎಂದರು. ಸೀತೆ, ಸಾವಿತ್ರಿ, ದ್ರೌಪದಿ ಮುಂತಾದ ಮಹಿಳೆಯರ ಪತಿವ್ರತಾ ಕಲ್ಪನೆಗಳ ಮೂಲಕ ಉಳಿದ ಮಹಿಳಾ ಸಮುದಾಯವನ್ನು ಪರೋಕ್ಷವಾಗಿ ಅವಮಾನಿಸುತ್ತಿದ್ದ ಮನುವಾದಿ ಪುರಾಣ ಪೊಳ್ಳು ಕಥೆಗಳನ್ನು ಜನತೆಯ ಮುಂದೆ ಬಿಚ್ಚಿಟ್ಟು ಜಾಗೃತಿಯನ್ನು ಮೂಡಿಸಿದರು. ಜುಟ್ಟು ಜನಿವಾರಗಳ ಪ್ರದರ್ಶನದ ಮೂಲಕ ತಾವು ಶ್ರೇಷ್ಠರು ಎನ್ನುತ್ತಿದ್ದ ಬ್ರಾಹ್ಮಣರ ಜುಟ್ಟು–ಜನಿವಾರಗಳನ್ನು ಕತ್ತರಿಸುವ ಚಳವಳಿಯನ್ನು ಕೈಗೊಂಡರು.

**ಉಪಸಂಹಾರ**

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ನಡೆದ ಅಕ್ಷರದ ಕ್ರಾಂತಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟ, ಸ್ವಾಭಿಮಾನದ ಚಳವಳಿಗಳು ಮಹಾತ್ಮ ಜ್ಯೋತಿಬಾ ಫುಲೆ, ಮಾತೆ ಸಾವಿತ್ರಿಬಾಯಿ ಫುಲೆ, ಛತ್ರಪತಿ ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ತಂದೆ ಪೆರಿಯಾರ್ ರಾಮಸ್ವಾಮಿ ನಾಯಕ, ಕೇರಳದ ನಾರಾಯಣಗುರು ಮೊದಲಾದ ಪೂರ್ವಿಕರ ತ್ಯಾಗದ ಫಲವಾಗಿ ಇಡೀ ಭಾರತದಾದ್ಯಂತ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಾಮಾಜಿಕ ಪರಿವರ್ತನಾ ಚಳವಳಿಯನ್ನು ಮುನ್ನಡೆಸಿದರು. ಆಳುವ ಹಕ್ಕನ್ನು ಕಸಿದುಕೊಂಡು, ಆಯುಧವ ನಿರಾಕರಿಸಿ, ಆಸ್ತಿ, ವಿದ್ಯೆ, ಅಧಿಕಾರಗಳ ನಿಷೇಧಿಸಿದ ಮನುಧರ್ಮಶಾಸ್ತ್ರವನ್ನು ಸುಟ್ಟುಹಾಕಿ ಹೊಸದಾದ ಸಮಾನತಾ ಸಂವಿಧಾನವನ್ನು ಬರೆದರು. ಒಂದು ವರ್ಗದ ಮೇಲೆ ನಡೆಯುವ ದಬ್ಬಾಳಿಕೆಗಳನ್ನು ಕೊನೆಗಾಣಿಸಲು ಮತ್ತೊಂದು ವರ್ಗಕ್ಕೆ ಅಧಿಕಾರಬೇಕು. ಎಲ್ಲಾ ಅಧಿಕಾರಗಳ ಕೀಲಿಕೈಯಂತೆ ಇರುವ ರಾಜಕೀಯ ಅಧಿಕಾರದಿಂದ ಎಲ್ಲಾ ರೀತಿಯ ಶೋಷಣೆಗಳನ್ನು ಕೊನೆಗಾಣಿಸಬಹುದೆಂದು ಅಂಬೇಡ್ಕರ್ ಕರೆ ನೀಡಿದರು. ಅಂಬೇಡ್ಕರ್ ಅವರ ಪ್ರಕಾರ ಪ್ರತಿಯೊಬ್ಬರಿಗೂ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ದೊರೆತರೆ ಅದೇ ನಿಜವಾದ 'ಪ್ರಬುದ್ಧ ಭಾರತ' ಎಂಬುದಾಗಿದೆ.

**ಕೊನೆ ಟಿಪ್ಪಣಿಗಳು**

1. ವಿದ್ಯಾಶಂಕರ, ಎಸ್. *ಕೆಳವರ್ಗದವರು ಹಾಗೂ ಪ್ರತಿಭಟನೆ.* ಪು. 34.
2. ಮಹಾತ್ಮ ಜ್ಯೋತಿಬಾ ಫುಲೆ. *ಗುಲಾಮಗಿರಿ.* ಪು. 120.
3. ಮಹೇಶ, ಎನ್. *ಸಾಮಾಜಿಕ ಪರಿವರ್ತನೆಯ ಚಳವಳಿಯ ಇತಿಹಾಸ.* ಪು.14.
4. ಅದೇ. ಪು. 17.
5. ಮಹೇಶ, ಎನ್. *ನಾಲ್ವಡಿ ಕೃಷ್ಣರಾಜ ಒಡೆಯರು.* ಪು. 12.
6. ಅದೇ. ಪು. 23

**ಪರಾಮರ್ಶನ ಗ್ರಂಥಗಳು**


- ಆಕಾಶವಾಣಿ. (1952, ಅಕ್ಟೋಬರ್). *ಸಣ್ಣಕತೆಗಳ ವಿಚಾರ ಕೂಟದ ಪ್ರಬಂಧ.*
- ಕನ್ನಡ ವಿಷಯ ವಿಶ್ವಕೋಶ. (2005). ಕರ್ನಾಟಕ ಸಂಪುಟ ಪರಿಷ್ಕೃತ ಸಂ.1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಕೃಷ್ಣಸ್ವರ್ಣಸಂದ್ರ, ಎಸ್. *ಮರ್ಯಾದಾ ಹತ್ಯೆ*